## ಮಾತುಕತೆ

ಮೂಡಿಬಂದಿವೆ. ಬಸ್ಸಿನಲ್ಲಿ ಓಡಾಡುವಾಗ, ಪರ ಊರಿನಲ್ಲಿ ವಸತಿಗಾಗಿ ಉಳಿದಾಗ, ನಾಟಕಕ್ಕೆ ಗೊತ್ತಾದ ಊರಿಗೆ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯವಾಗದೇ ಹೋದಾಗ, ಒಮ್ಮೊಮ್ಮೆ ಊರ ದಾರಿ ಬಿಟ್ಟು ಪರ ಊರಿನ ದಾರಿಯಲ್ಲಿ ಸಾಗಿ, ತೊಂದರೆ ಅನುಭವಿಸಿದ್ದೇವೆ. ಕೆಲವಂತೂ ಯಾರ ಮುಂದೆಯೂ



ಹೇಳುವಂತಿಲ್ಲ. ನಮ್ಮ ನಮ್ಮ ಕಲಾವಿದೆಯರ ಬಳಿ ಮಾತ್ರ ಹಂಚಿಕೊಳ್ಳಬೇಕು. ಯಾಕೆಂದರೆ ನಾವು ಸಮಾನ ದುಃಖಿಗಳು.

**◆ ಅನುಭವಿ ಮತ್ತು ಹೊಸ ಕಾಲದ ಕಲಾವಿದರ ನಡುವೆ ಕೊಂಡಿಯಂತೆ ಪಾತ್ರ ಮಾಡಿದ ನೀವು ಈಗಲೂ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಇಂದಿನ ವೃತ್ತಿ, ಹವ್ಯಾಸಿ ಕಲಾವಿದೆಯರನ್ನೂ ನೋಡಿದ್ದೀರಿ. ಅಂದಿಗೂ ಇಂದಿಗೂ ಏನಾದರೂ ವ್ಯತ್ಯಾಸ ನಿಮ್ಮ ಗಮನಕ್ಕೆ ಬಂದಿದ್ದರೆ ಅದರ ಕುರಿತು ನಿಮಗೇನನಿಸುತ್ತದೆ?**

ಮಹಾನ್ ನಾಟಕಕಾರ ಪಿ.ಬಿ. ಧುತ್ತರಗಿ ಅವರ ಪತ್ನಿ ಸರೋಜಮ್ಮ ಧುತ್ತರಗಿ, ಎಚ್.ಡಿ.ಸರೋಜಮ್ಮ, ಹಳೇಬೀಡು ರಂಗಮ್ಮ, ತಳವಾರ ಹನುಮಂತಮ್ಮ, ಗಂಗಮ್ಮ, ಶಾಂತಮ್ಮ, ಸುಭದ್ರಮ್ಮ ಮನ್ಸೂರು– ಹೀಗೆ ಹೆಸರು ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತದೆ. ಇವರೆಲ್ಲ ಆಗಿನ ಕಾಲಕ್ಕೆ ಹೆಸರಾಂತ ಕಲಾವಿದೆಯರು. ಇವರೊಟ್ಟಿಗೆ ಕೆಲಸ ಮಾಡಲು ನನಗೆ ಅವಕಾಶ ದೊರೆಯಿತು. ಅಭಿನಯ, ಸಂಗೀತ, ಸಂಭಾಷಣೆ ಮೇಕಪ್, ಸಹ ಕಲಾವಿದೆಯರಿಗೆ ಕೊಡುತ್ತಿದ್ದ ಸಹಕಾರ ನೋಡಿ ಕಲಿಯುವಂತಿತ್ತು. ಇವರೆಲ್ಲ ಏಣಗಿ ಬಾಳಪ್ಪ, ಮಾಸ್ಟರ್ ಹಿರಣ್ಣಯ್ಯನವರಂತಹ ನಾಟಕ ತಂಡಗಳ ದೊಡ್ಡ ದೊಡ್ಡ ಕಲಾವಿದರ ಜತೆಗೆ ಪಳಗಿದವರು. ರಂಗ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತವರು. ನೃತ್ಯದಲ್ಲಿಯೂ ಪರಿಣಿತರು. ತಾವೇ ತಮ್ಮ ಪಾತ್ರಕ್ಕೆ ಹಾಡಿಕೊಳ್ಳುತ್ತಿದ್ದುದಲ್ಲದೇ ಹಿನ್ನೆಲೆಯಾಗಿಯೂ ಹಾಡುತ್ತಿದ್ದರು. ಸುಭದ್ರಮ್ಮ ಮನ್ಸೂರು ಅವರಂತೂ ಸಾಕ್ಷಾತ್ ಸಂಗೀತ ಶಾರದೆ. ಅವರು ಆಗಲೇ ರೇಡಿಯೋ ಕಲಾವಿದೆಯಾಗಿಯೂ ಹೆಸರುವಾಸಿಯಾಗಿದ್ದರು. ಆದರೆ ನಾವು ಯಾವುದೇ ತರಬೇತಿ ಇಲ್ಲದೆ ಈ ಕ್ಷೇತ್ರಕ್ಕೆ ಬಂದವರು. ಇವರೆಲ್ಲರಿಂದ ಕಲಿತದ್ದೇ ಹೆಚ್ಚು. ಪಾತ್ರದ ಬಗ್ಗೆ, ಹಾಡಿನ ಬಗ್ಗೆ ಹೇಳಿಕೊಡುತ್ತಿದ್ದರು. ಒಂದು ರೀತಿ ರಂಗಭೂಮಿಯೇ ತರಬೇತಿ ಶಾಲೆ. ಅವರು ತಾಯಿಯಾಗಿ, ಗುರುವಾಗಿ ನಡೆಸಿದರು. ಅವರಲ್ಲಿ ಪೂಜ್ಯ ಭಾವನೆ ನನಗೆ. ದೊಡ್ಡ ಕಲಾವಿದೆಯರೆಂಬ ದೊಡ್ಡಸ್ತಿಕೆ ಅವರಿಗೆ ಇರಲಿಲ್ಲ. ಪಾತ್ರ ಎಷ್ಟೇ ಸಣ್ಣದಿದ್ದರೂ, ಅವರೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕವಾಗಿ ಗಟ್ಟಿಯಾಗಬೇಕು ಎಂಬುದರ ಗುಟ್ಟು ತಿಳಿಸಿಕೊಟ್ಟರು. ಅಂತೆಯೇ ನಾನು ಗ್ರಾಮೀಣ ರಂಗಭೂಮಿಯ ವೃತ್ತಿ ಕಲಾವಿದೆ ಎಂಬ ಅರಿವಿಟ್ಟುಕೊಂಡೇ ಗಟ್ಟಿಯಾಗಲು ಸಾಧ್ಯವಾಯಿತು.

ಹಿಂದಿನ ಕಲಾವಿದರು ಹಳ್ಳಿ ನಾಟಕಗಳಲ್ಲಿ ಅಭಿನಯಿಸಲು ಒಮ್ಮೆ ಒಪ್ಪಿಕೊಂಡ ಮೇಲೆ ಮಾತಿಗೆ